<u>ಗೌರಿಬಿದನೂರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯದಲ್ಲಿ</u>

ಸಿ.ಸಿ. **355/2023**

ಪಿ.ಡಬ್ಲ್ಯೂ-**1**

ಸಿ.ಡಬ್ಲ್ಯೂ-**1**

ಸಾಕ್ಷಿದಾರರ ಹೆಸರು ಃ ಗಂಗರಾಜು

ತಂದೆ ಹೆಸರು ಃ ಗೆಟ್ಟಪ್ಪ

ವಯಸ್ಸು ಃ **61** ವರ್ಷ

ಕೆಲಸ ಃ ನಿವೃತ್ತ ಶಿಕ್ಷಕ

ವಾಸ ಸ್ಥಳ ಃ ನರಸಾಪುರ

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ **15-06-2026**

<u>ಮುಖ್ಯ ವಿಚಾರಣೆಃಃ ಶ್ರೀ ಸರ್ಕಾರಿ ಅಭಿಯೋಜಕರಿಂದಃ</u>

ಆರೋಪಿಯು ನನ್ನ ಅಣ್ಣ. ನನಗೆ ಈ ಪ್ರಕರಣದ ವಿಚಾರಗಳು ಗೊತ್ತಿಲ್ಲ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದನ್ನು ಗುರುತಿಸಿದ್ದು, ಅದನ್ನು ನಿಪಿ-**1** ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**1** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರ್ ಅನ್ನು ತೋರಿಸಲಾಗಿ ಅದನ್ನು ಗುರುತಿಸಿದ್ದು, ಅದನ್ನು ನಿಪಿ-**2** ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**2** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ 3 ಅಡಿ ಉದ್ದದ ದೊಣ್ಣೆಯನ್ನು ತೋರಿಸಲಾಗಿ ಸಾಕ್ಷಿಯು ಗುರುತಿಸಿರುವುದಿಲ್ಲ. ನಿಪಿ-1 ಮತ್ತು 2 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**.)**

ದಿನಾಂಕ 23.03.2023 ರಂದು ಸಂಜೆ 05.00 ಗಂಟೆಗೆ, ಜಮೀನಿನ ವಿಚಾರವಾಗಿ ಹಳೇ ದ್ವೇಷವಿದ್ದು, ಆರೋಪಿತರು ನನ್ನ ಮೇಲೆ ಜಗಳ ತೆಗೆದು, 1 ನೇ ಆರೋಪಿಯು ನನ್ನನ್ನು ದೊಣ್ಣೆಯಿಂದ ಹೊಡೆದರು ಎಂದರೆ ಸರಿಯಲ್ಲ. ಅದೇ ದಿನ

ನನ್ನನ್ನು ಕೆಟ್ಟ ಶಬ್ದದಿಂದ ಬೈದರು ಎಂದರೆ ಸರಿಯಲ್ಲ. ನನಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ದಿನಾಂಕ 24.03.2023 ರಂದು ಪೊಲೀಸರು ಸ್ಥಳಕ್ಕೆ ಬಂದು ಬೆಳಗ್ಗೆ 09.00 ರಿಂದ 10.00 ಗಂಟೆಯಲ್ಲಿ ನಾನು ತೋರಿಸಿದ ಸ್ಥಳಕ್ಕೆ ಚಾ.ಸಾ-2 ರ ಸಮಕ್ಷಮ ಮಹಜರ್ ಬರೆದು ಅದೇ ದಿನ ಒಂದು ದೊಣ್ಣೆಯನ್ನು ವಶಪಡಿಸಿಕೊಂಡು ನನಗೆ ಓದಿ ತಿಳಿದ ನಂತರ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. (3 ಅಡಿ ಉದ್ದದ ದೊಣ್ಣೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು)( ನ್ಯಾಯಾಲಯದ ಅನುಕೂಲಕ್ಕಾಗಿ).

ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಸ್.ಡಿ ರವರಿಂದ ಇರುವುದಿಲ್ಲ.
ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಹೆ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು